ವರ್ಷ	ಬಿಡುಗಡೆಯಾದ ಹಣ (ಲಕ್ಷಗಳಲ್ಲಿ)
೧೯೯೬-೯೭	೭.೫೦
೧೯೯೭-೯೮	೭.೫೦
೧೯೯೮-೯೯	೧೫.೦೦
೧೯೯೯-೨೦೦೦	೨೨.೮೩
ಒಟ್ಟು	೫೨.೮೩

ಆ) ಒಟ್ಟು ರೂ.೫೨.೮೩ ಲಕ್ಷಗಳಲ್ಲಿ ರೂ.೩೦.೧೩ ಲಕ್ಷ ಹಣ ಖರ್ಚಾಗಿರುತ್ತದೆ. ರೂ.೭.೫೦ ಲಕ್ಷಕ್ಕೆ ಬಳಕೆ ಪ್ರಮಾಣ ಪತ್ರ ಕಳುಹಿಸಲಾಗಿದೆ. ೧೯೯೯-೨೦೦೦ನೇ ಸಾಲಿನಲ್ಲಿ ರೂ.೨೨.೮೩ ಲಕ್ಷ ಕರ್ನಾಟಕ ಭೂಸೇನಾ ನಿಗಮ, ಬೀದರ್‌ರವರಿಗೆ ಉಪವಿಭಾಗಾಧಿಕಾರಿಗಳು, ಬಸವಕಲ್ಯಾಣರವರು ಪಾವತಿಸಿರುತ್ತಾರೆ.

ರೂ.೨೧.೬೮ ಲಕ್ಷ ಮೊತ್ತದ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು, ಸದರಿ ಕಾಮಗಾರಿಗಳ ಬಗ್ಗೆ ಪುರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಂದ ದೂರು ಬಂದ ಪ್ರಯುಕ್ತ ಉಪವಿಭಾಗಾಧಿಕಾರಿಗಳು ಬಸವ ಕಲ್ಯಾಣ, ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಕಾರ್ಯ ನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಜಂಟಿ ಸಮೀಕ್ಷೆ ಕೈಗೊಂಡು ವರದಿ ನೀಡಲು ದಿನಾಂಕ:೩೧-೧-೨೦೦೧ ರಂದು ಆದೇಶಿಸಲಾಗಿದೆ.

ಇ) ಕಳೆದ ಎರಡು ವರ್ಷಗಳಲ್ಲಿ ಆಶ್ರಯ ಸಮಿತಿ ರಚನೆಯಾಗಿರುವುದಿಲ್ಲವಾದ್ದರಿಂದ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಬಂದಿರುವುದಿಲ್ಲ.

ಬಿಜಾಪುರ ಜಿಲ್ಲೆಯಲ್ಲಿ ಒಣದ್ರಾಕ್ಷಿ ಘಟಕ ಸ್ಥಾಪಿಸುವುದು.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ(ತಿಕೋಟ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000ನೇ ಸಾಲಿಗೆ ಬಿಜಾಪುರ ಜಿಲ್ಲೆಯ ಬೆಳೆಗಾರರಿಗೆ ಸಣ್ಣ ಕೈಗಾರಿಕೆ ಇಲಾಖೆಯಿಂದ ಒಣದ್ರಾಕ್ಷಿ ಘಟಕಗಳಿಗೆ ಸಹಾಯಧನ ಒದಗಿಸುವ ವಿಷಯ ಸರ್ಕಾರಕ್ಕೆ ಗೊತ್ತಿದೆಯೆ?

ಆ) ಹಾಗಿದ್ದಲ್ಲಿ, ಎಷ್ಟು ಘಟಕಗಳಿಗೆ (ಬಿಜಾಪುರ ಜಿಲ್ಲೆಯಲ್ಲಿ) ಎಷ್ಟು ಮೊತ್ತವನ್ನು ಮಂಜೂರು ಮಾಡಲಾಗಿದೆ?

ಇ) ಮಂಜೂರಾತಿ ಮಾಡಿದ ಹಣವನ್ನು ಡಿಸೆಂಬರ್ 2000ರೊಳಗಾಗಿ ನೀಡುವುದಾಗಿ ತಿಳಿಸಲಾಗಿತ್ತು. ಆದರೆ ಇಲ್ಲಿಯವರೆಗೂ ನೀಡದಿರಲು ಕಾರಣವೇನು?

ಈ) ಇದರಿಂದ ಜಿಲ್ಲೆಯ ದ್ರಾಕ್ಷಿ ಬೆಳೆಗಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಮಂಜೂರಾದ ಹಣವನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು? (ವಿವರ ನೀಡುವುದು)?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಹೌದು.

ಆ) 67 ಘಟಕಗಳಿಗೆ ರೂ. 1,29,59,000ಗಳನ್ನು ಬಿಜಾಪುರ ಜಿಲ್ಲಾ ಕೈಗಾರಿಕಾ ಕೇಂದ್ರದಿಂದ 1999-2000ನೇ ಸಾಲಿನಲ್ಲಿ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಇ) ಸಹಾಯಧನವನ್ನು ಜೇಷ್ಠತೆಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು.

ಈ) ಬಹುತೇಕ ಒಣದ್ರಾಕ್ಷಿ ಘಟಕಗಳು ಕಾರ್ಯನಿರ್ವಹಿಸುತ್ತಿರುವುದರಿಂದ ದ್ರಾಕ್ಷಿ ಬೆಳೆಗಾರರಿಗೆ ಇದರಿಂದ ತೊಂದರೆಯಾಗಿಲ್ಲ.

ಉ) ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನಾಧರಿಸಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.